ಓ.ಎಸ್.ನಂ.116/2021
ಪಿ.ಡಬ್ಲ್ಯೂ-01

**ಸಾಕ್ಷಿಯನ್ನು ದಿಃ 21.06.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. M.R.N.ವಕೀಲರಿಂದ.**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಈ ದಾವೆ ದಾಖಲು ಮಾಡಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಈ ದಾವೆಯ ದಾವಾ ಸ್ವತ್ತು ನನಗೆ ಸೇರಿಬೇಕೆಂದು 1985 ರಿಂದ ನನಗೆ ಗೂತ್ತು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಎಸಿ ನ್ಯಾಯಾಲಯದಲ್ಲಿ 15 ವರ್ಷಗಳ ಹಿಂದೆ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಪ್ರಕರಣ ಏನಾಯಿತೆಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ಸಂಖ್ಯೆಯೂ ಸಹ ನನಗೆ ಗೊತ್ತಿಲ್ಲ. ಎಸಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೆಳುತ್ತಾರೆ.

ರಂಗಮ್ಮಾ ಅವರಿಗೆ ಹೆಸರಿಗೆ ಇರುವ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಇಲ್ಲವೆಂದು ಹೇಳುತ್ತಾರೆ. ಸದರಿ ಕ್ರಯ ಪತ್ರದಲ್ಲಿ 81 ರ ಪೈಕಿ ಎಂದು ಇದ್ದು ಸರ್ವೆ ನಂ 81 ರಲ್ಲಿ ಎಷ್ಟು ವಿಸ್ತೀರ್ಣ ಇದೆ ತೋರಿಸಲು ದಾಖಲೆ ಹಾಜರುಪಡಿಸಿ ಬಗೆ ನನಗೆ ಗೊತ್ತಿಲ್ಲ. ನಿ.ಪಿ 14 ಅನ್ನು ನಾನು ಓದಿ ತಿಳಿದುಕೊಂಡಿರುದಿಲ್ಲ. ದಾವೆಯನ್ನು 1 ಎಕರೆ 38 ಗುಂಟೆಗೆ ಸಂಬಂಧಿಸಿದಂತೆ ದಾಖಲು ಮಾಡಿರುತ್ತೇನೆ. ನಿ.ಪಿ 14 ಲ್ಲಿ 1 ಎಕರೆ 20 ಗುಂಟೆ ಎಂದು ಇದೆ ಎಂದರೆ ಸಾಕ್ಷಿ 1 ಎಕರೆ 38 ಗುಂಟೆ ಎಂದು ಹೇಳುತ್ತಾರೆ.

ನನ್ನ ಜೊತೆ ಹುಟ್ಟಿದವರು ಹೆಸರು ಜಯಮಾ, ಶಾಂತಮ್ಮಾ, ಬಾಗ್ಯಮ್ಮಾ ಮತ್ತು ಯಶೋಧಮ್ಮಾ ಇರುತ್ತಾರೆ. ಅವರು ಜೀವಂತ ಇರುತ್ತಾರೆ. ನಿ.ಪಿ 1 ರಲ್ಲಿ ಅವರನ್ನು ತೋರಿಸಿಲ್ಲ ಯಾಕೆ ಎಂದರೆ ಸಾಕ್ಷಿ ಅವರ ಮದುವೆ ಆಗಿದೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಅವರನ್ನು ಪಾಕ್ಷಗಾರರನ್ನಾಗಿ ಮಾಡಲು ನನ್ನದೇನು ತೊಂದರೆ ಇರುವುದಿಲ್ಲ.

**ಮುಂದುವರೆ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.